'ಇನ್ನೂರು ವರ್ಷ ಹಿಂದಿನ ಕಾನೂನನ್ನು ಇಂದಿಗೂ ಜಾರಿ ಮಾಡ್ತೀರಲ್ಲಾ ಹಾಗೆ ನನ್ನ ಮದುವೆ ನಿಮ್ಮ ಮರ್ಯಾದೆಯಂತೆ! ಮಾಡಿ ಮಾಡಿ ನಿಮಗೆ ಯಾವಾಗ ಬೇಕಾದರೂ ಮಾಡಿ' ಎಂದು ಅವನನ್ನು ಛೇಡಿಸಿದ್ದಳು ಅವಳು. ಜೊತೆಗೆ ಮುಗುಳು ನಗೆಯೊಂದು ನಿರಂತರವಾಗಿ ಲಾಸ್ಯವಾಡುತ್ತಿತ್ತು.

'ಅದು ಕೂಡ ಬಿಡಿ ಪಪ್ಪ. ಈಗ ಮೂರು ವರ್ಷಗಳ ಹಿಂದೆ ಏನಾಯಿತು ನೀವೇ ನೆನಪಿಸಿಕೊಳ್ಳಿ. ನಿಮ್ಮ ಹೋಮ್ ಆಫೀಸಿನಲ್ಲಿ ಇತ್ತಲ್ಲಾ ದೂಳು ಹಿಡಿದ ದಪ್ಪನೆಯ ರೆಕಾರ್ಡ್... ಹತ್ತು ವರ್ಷಗಳಿಂದ ರೆಕಾರ್ಡ್‌ರೂಮಿನಲ್ಲಿ ಕೊಳೆಯುತ್ತಿದ್ದ ಆ ದೂಳು ಹಿಡಿದ, ದೂಳು ಅಂದರೆ ಫೈನ್ ಡಸ್ಟ್... ಆ ರೆಕಾರ್ಡ್... ಅದರಲ್ಲಿ ನೀವು ಇಂತಿಷ್ಟೇ ದಿನಗಳಲ್ಲಿ ಜಡ್ಜ್‌ಮೆಂಟ್ ಕೊಡಬೇಕಿತ್ತು. ಅದನ್ನು ಅರ್ಧ ರಾತ್ರಿಯವರೆಗೂ ನೀವು ದಿನಾ ಓದ್ತಾ ಇರ್ತಿದ್ರಿ. ಆಮೇಲೆ ಅಸಾಧ್ಯ ಕೆಮ್ಮು ಆರಂಭ ಆಯಿತು. ಡಾಕ್ಟರ ಮೇಲೆ ಡಾಕ್ಟರು ನಿಮ್ಮ ಸೇವೆಗಿದ್ದರೂ ಪತ್ತೆ ಹಚ್ಚಲಿಲ್ಲ. ಎಷ್ಟು ವೀಕ್‌ನೆಸ್ ಆಯಿತೂ ಅಂದರೆ ನೀವು ಕುಸಿದು ಬಿದ್ದಿರಿ. ಆಮೇಲೆ ಗೊತ್ತಾಗಿದ್ದು ನಿಮ್ಮ ಪ್ಲೇಟಿಲೆಟ್ಸ್ ಹದಿನೈದು ಸಾವಿರಕ್ಕೆ ಇಳಿದು ಹೋಗಿದೆ ಅಂತ.'

'ಸಾಕು... ರೂಹಿ ಸಾಕು ಮಾಡು. ಏನಾಗಿದೆ ನಿನಗೆ?'

ಅವಳು ಒಮ್ಮೆಲೇ ಮಾತು ನಿಲ್ಲಿಸಿದಳು. ದೀರ್ಘವಾಗಿ ಅವನನ್ನು ಒಮ್ಮೆ ದಿಟ್ಟಿಸಿ ನೋಡಿ ತನ್ನ ಕೋಣೆಗೆ ಹೋಗಿ ಬಾಗಿಲು ಬಡಿದುಕೊಂಡಳು.

ಹೇಗೆ ತಿಳಿಹೇಳುವುದು ಅವಳಿಗೆ. ಅವನಿಗಿದ್ದ ಆತಂಕ, ಭಯ ಒಂದೇ ಎರಡೇ? ಹೊಸ ಕನಸುಗಳಿಂದ ನಳನಳಿಸುತ್ತಿದ್ದ ಎಳೆ ರೆಂಬೆಯೊಂದು ಜೀವಂತವಾಗಿ ಬೆಂದು ಹೋಗುವ ಹೃದಯವಿದ್ರಾವಕ ಘಟನೆಗಳಿಗೆ ಅವನು ಸಾಕ್ಷಿಯಾಗಿದ್ದ. ಅಗ್ನಿ ಸಾಕ್ಷಿಯಾಗಿ ಕೈಹಿಡಿದವನೇ ಮರಣಮೃದಂಗದ ರೂವಾರಿಯಾಗಿದ್ದ; ಅಮಾನವೀಯತೆಗೆ ತಕ್ಕಡಿ ಹಿಡಿಯುವ ಕಾಯಕದಲ್ಲಿ ಅವನ ಜೀವದ್ರವ್ಯ ಅನೇಕ ಬಾರಿ ಸೋರಿ ಹೋಗುತ್ತಿತ್ತು. ಪತಿಯಿಂದ ಕೊಲೆಯಾದ, ಅತ್ತೆ ಮಾವಂದಿರ ಮನೆಯಲ್ಲಿ ನೇಣು ಹಾಕಿಕೊಂಡ, ಕೊಲೆಯೋ ಆತ್ಮಹತ್ಯೆಯೋ ಎಂದು ನಿರ್ಧರಿಸಲಾಗದ ಎಷ್ಟೊಂದು ಪ್ರಕರಣಗಳು... ವಕೀಲರ ಮತ್ತು ನ್ಯಾಯಾಧೀಶರ ಹೆಣ್ಣು ಮಕ್ಕಳು ಕೂಡ ಈ ಉರುಳಿನಲ್ಲಿ ಸಿಲುಕಿದ್ದನ್ನು ಅವನು ಕಣ್ಣಾರೆ ಕಂಡಿದ್ದ. ಅವರ ಪೋಸ್ಟ್ ಮಾರ್ಟಮ್ ವರದಿಗಳನ್ನು ಪರಿಶೀಲನೆ ಮಾಡಿದಾಗ ಹೊಟ್ಟೆಯಲ್ಲಿ ಕೆಂಡ ಕಲಸಿದಂತಾಗುವುದು. ಕಣ್ಣು ಕುಕ್ಕುವಂತಹ ಸಾಕ್ಷ್ಯಾಧಾರಗಳಿದ್ದರೂ ಅವುಗಳನ್ನು ಮುಚ್ಚಿ ಹಾಕುವ ಹುನ್ನಾರಗಳನ್ನು ಕಂಡಿದ್ದ. ಸಂಬಂಧ ಪಟ್ಟ ಫೈಲಿನ ಜೊತೆಯಲ್ಲಿ ಲಗತ್ತಿಸಲಾಗಿದ್ದ ಅಸಹಜ ಸಾವುಗಳ ಭೀಭತ್ಸಕರವಾದ ಫೋಟೊಗಳನ್ನು ಕಂಡು ಹಲವು ಇರುಳುಗಳ ನಿದ್ರೆಯನ್ನು ಕಳೆದುಕೊಂಡಿದ್ದ. ಆ ಕೊಲೆಗಳನ್ನು ಮುಚ್ಚಿ ಹಾಕುವ ಹುನ್ನಾರಗಳನ್ನು ಕಂಡಿದ್ದ. ಕೊಲೆಗಾರರನ್ನು ಬಿಡುಗಡೆಗೊಳಿಸಲು ಇಡೀ ವ್ಯವಸ್ಥೆಯೇ ಸನ್ನದ್ಧವಾಗಿ ನಿಂತಿದ್ದನ್ನು ಕಂಡು ಅವನು ಕೋಪಾವಿಷ್ಟನಾಗಿದ್ದ. ಇಂತಹ ಹೀನಾಯ ಪರಿಸ್ಥಿತಿ ತನ್ನ ಮಗಳಿಗೂ ಬರಬಾರದಲ್ಲ... ತಾನು ಮನೋರೋಗಿಯಾಗುತ್ತಿಲ್ಲವಷ್ಟೆ!!

ರೂಹಿಯೊಡನೆ ಮಾತನಾಡಿದ ನಂತರ ಒಂದಿಷ್ಟು ಸಮಾಧಾನವಾಯಿತು ಅವನಿಗೆ. ತನ್ನ ಅಂತರಂಗದೊಂದಿಗೆ ಅನುಸಂಧಾನ ನಡೆಸುವಷ್ಟರಲ್ಲಿ ಅವನ ಊಟ ಮುಗಿದಿತ್ತು. ಅವನ ಆಫೀಸಿನ ಸಿಬ್ಬಂದಿ ದಪ್ಪ ರಿಜಿಸ್ಟರ್‌ಗಳೊಡನೆ ಅವನ ಸಹಿಗಾಗಿ ಕಾದಿದ್ದರು. ಅಗತ್ಯದ ಕೆಲಸಗಳನ್ನು ಮುಗಿಸಿ ತಲೆಯೆತ್ತಿದಾಗ ಎದುರಿಗೆ ಬೆಂಚ್ ಕ್ಲರ್ಕ್ ನವೀನ್ ನಿಂತಿದ್ದ. 'ಅದೇ ಆ ಕಸ್ಟಡಿ ಕೇಸ್‌ನವರು ಮತ್ತೆ ಅವರ ಲಾಯರ್‌ಗಳು ಕಾಯ್ತಿದ್ದಾರೆ' ಎಂದ.

'ಲಾಯರ್‌ಗಳು ಈಗ ಬೇಡ. ಬರೀ ಪಾರ್ಟಿಗಳನ್ನು ಒಳಗೆ ಕಳಿಸು.'

'ಆ ಮಗುವಿನ ಜೊತೆಯಲ್ಲಿಯೇ ಆ ಲೇಡೀಸನ್ನು ಕೂಡ ಕಳುಹಿಸಲಾ?' ಎಂದು ಕೇಳಿದ. ಶಾಹಿದ್